**ಸಿಸಿ ಸಂಖ್ಯೆಃ -315/2014** **ಡಿ.ಡಬ್ಲ್ಯೂ:-1**

ದಿನಾಂಕಃ **26-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಮಾನ್ಯ ಸ.ಸ.ಅ.ರವರಿಂದ :-

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1 ರಿಂದ 10 ನೇ ತರಗತಿಯ ವರೆಗೆ ಒಂದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹೊನ್ನಾಳಿ ಮುನ್ಸಿಪಾಲಿಟಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನನ್ನು ಶಾಲೆಗೆ ನಮ್ಮ ತಂದೆಯವರು ದಾಖಲು ಮಾಡಿರುತ್ತಾರೆ. ನಿಪಿ-6 ರಂತೆ ಅರ್ಜಿಯನ್ನು ನಮ್ಮ ತಂದೆ ಯಲ್ಲಪ್ಪರವರು ಮಾಹಿತಿಯನ್ನು ಕೊಟ್ಟು ಅದಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಯಲ್ಲಪ್ಪ. ಸಾಕ್ಷಿಗೆ ನಿಪಿ-6 ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ನಿಮ್ಮ ಹೆಸರು ಕತಗಿ ಸಿದ್ದಪ್ಪ ನಿಮ್ಮ ತಂದೆಯ ಹೆಸರು ಯಲ್ಲಪ್ಪ ಮತ್ತು ನಿಮ್ಮ ಜನ್ಮ ದಿನಾಂಕ 06-03-1951 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ  ದಾಖಲೆ ಸರಿಯಾಗಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಯಲ್ಲಪ್ಪನ ಹೆಬ್ಬೆಟ್ಟಿನ ಗುರುತು ನನ್ನ ತಂದೆಯ ಹೆಬ್ಬೆಟ್ಟಿನ ಗುರುತು ಅಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-5 ರಲ್ಲಿ ಬರೆದಿರುವಂತೆ ಸರ್ಕಾರಿ ಕನ್ನಡ ಬಾಲಕರ ಶಾಲೆ ಹೊನ್ನಾಳಿಯಲ್ಲಿ ಓದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದು ನನಗೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ನಿಪಿ-5 ದಾಖಲೆಯಲ್ಲಿ  ನಿಮ್ಮ ಹೆಸರು ಕೆ ಸಿದ್ದಪ್ಪ ನಿಮ್ಮ ತಂದೆಯ ಹೆಸರು ಯಲ್ಲಪ್ಪ ಮತ್ತು ನಿಮ್ಮ ಜನ್ಮ ದಿನಾಂಕ 06-03-1951 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ  ದಾಖಲೆ ಸರಿಯಾಗಿ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-4 ದಾಖಲೆಯಲ್ಲಿಯೂ ಸಹ ನಿಮ್ಮ ಹೆಸರು ಕೆ ಸಿದ್ದಪ್ಪ ನಿಮ್ಮ ತಂದೆಯ ಹೆಸರು ಯಲ್ಲಪ್ಪ ಮತ್ತು ನಿಮ್ಮ ಜನ್ಮ ದಿನಾಂಕ 06-03-1951 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆ ನನಗೆ ಸಂಬಂಧಪಟ್ಟಿದ್ದಲ್ಲ

ಎಂದು ನುಡಿಯುತ್ತಾರೆ. ನಿಪಿ-2 ದಾಖಲೆ ನನಗೆ ಸಂಬಂಧಪಟ್ಟಿದ್ದಲ್ಲ. ಸಾಕ್ಷಿಗೆ ನಿಪಿ-2 ದಾಖಲೆಯಲ್ಲಿ ನಿಮ್ಮ ಜನ್ಮ ದಿನಾಂಕ 06-03-1951 ರ ಬದಲಾಗಿ 06-03-1954 ಎಂದು ತಿದ್ದುಪಡಿಯಾಗಿದೆ ಎಂದರೆ ನನಗೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ನಿಪಿ-3 ನನ್ನ ಸೇವಾಪುಸ್ತಕ. ನಿಪಿ-3 ರಲ್ಲಿ ನಮೂದಾಗಿರುವ ಮಾಹಿತಿಯನ್ನು ನಿಡಿ-1 ರ ಆಧಾರದ ಮೇಲೆ ಕೊಟ್ಟಿರುತ್ತೇನೆ. ನಿಪಿ-3 ಸೇವಾಪುಸ್ತಕದಲ್ಲಿ ಮಾಹಿತಿಯನ್ನು ನಮೂದು ಮಾಡಲು ಎಷ್ಟು ವರ್ಷಗಳ ಹಿಂದೆ ಮಾಹಿತಿಯನ್ನು ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ನಿಡಿ-1 ದಾಖಲೆಯನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ನಿಡಿ-1 ದಾಖಲೆಯ ನೈಜ್ಯತೆಯನ್ನು ರುಜುವಾತು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಡಿ-2 ರಿಂದ 5 ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಪಡದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯ ನನಗೆ ಸಂಬಂಧಪಟ್ಟ ದಾಖಲೆ ಆಗಿದ್ದರೂ ಸಹ ನನಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 06-03-1951 ರಂದು ಜನಿಸಿದ್ದರೂ ಸಹ ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ನಿಪಿ-2 ದಾಖಲೆಯಲ್ಲಿ ನನ್ನ ಜನ್ಮ ದಿನಾಂಕವನ್ನು ದಿಃ 06-03-1954 ಎಂದು ತಿದ್ದುಪಡಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯಲ್ಲಿ ನನ್ನ ಜನ್ಮ ದಿನಾಂಕವನ್ನು 06-03-1951 ಇರುವುದನ್ನು ದಿಃ 06-03-1954 ಎಂದು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.